## ಕನ್ನಡಕಧಾರಿ

ದೂರದಲ್ಲಿ ಬರುತ್ತಿದ್ದ ಕನ್ನಡಕಧಾರಿ ಹುಡುಗಿಯೊಬ್ಬಳನ್ನು ತನ್ನ ಹೆಂಡತಿಗೆ ತೋರಿಸಿದ ಪರಮೇಶಿ, 'ನೋಡೆ, ನಾನು ಕಾಲೇಜಿನಲ್ಲಿ ಓದುವಾಗ ಇವಳು ನನ್ನ ಹಿಂದೆ ಬಿದ್ದಿದ್ದಳು. ನಾನು ಮಾತ್ರ ಅವಳಿಗೆ ಕ್ಯಾರೆ ಅನ್ನಲಿಲ್ಲ' ಎಂದು ಹೆಮ್ಮೆಯಿಂದ ಹೇಳಿಕೊಂಡ. ಅದಕ್ಕೆ ಅವಳು ಕೇಳಿದಳು, 'ಹೌದೇನ್ರೀ, ಅವಳು ಆಗಲೂ ಇದೇ ರೀತಿ ಕನ್ನಡಕ ಹಾಕಿಕೊಳ್ಳುತ್ತಿದ್ದಳಾ?'. 'ಇಲ್ಲ ಕಣೆ' ಎಂದ ಪರಮೇಶಿ. 'ಅದಕ್ಕೆ, ಆಕೆ ನಿಮ್ಮ ಹಿಂದೆ ಬಿದ್ದಿದ್ದು ಅನಿಸುತ್ತೆ' ಎಂದಳು.

**ಶಂಕರೇಗೌಡ ತುಂಬಕೆರೆ**





## ಚಪ್ಪಲಿ ಕಳ್ಳ

'ನಾಚಿಕೆ ಆಗೋಲ್ಲವೇನಯ್ಯ ನಿನಗೆ? ಕಳೆದ ವರ್ಷ ಇದೇ ರೀತಿ ಚಪ್ಪಲಿ ಕದ್ದು ಸಿಕ್ಕಿಬಿದ್ದಿದ್ದೆ. ನಾನೇ ದಂಡ ಕಟ್ಟಿಸಿದ್ದೆ. ಈಗ ಮತ್ತೆ ಚಪ್ಪಲಿ ಕದ್ದು ಬಂದಿದ್ದೀಯ!' ಭರಮನಿಗೆ ನ್ಯಾಯಾಧೀಶರು ತರಾಟೆಗೆ ತೆಗೆದುಕೊಂಡರು. 'ಏನು ಮಾಡಲಿ ಸಾರ್? ಈಗಿನ ಯಾವ ಚಪ್ಪಲಿಗಳೂ ಒಂದು ವರ್ಷ ಬಾಳಿಕೆ ಬರುವುದಿಲ್ಲ. ಹಾಗಾಗಿ ಮತ್ತೆ ಮತ್ತೆ ಕದಿಯಲೇಬೇಕಾಗುತ್ತೆ!' ಎಂದ ಭರಮ.

**ಕೆ. ಶ್ರೀನಿವಾಸ ರಾವ್**